ಓ.ಎಸ್.468-2014

ಪಿಡಬ್ಲು -೧

ದಿ: 27.02.2026 ರಂದು 8ನೇ ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು**</u>:9 ಮತ್ತು 10 ನೇ ಪ್ರತಿವಾದಿ ಪರ ಶ್ರೀಯುತ ಕೆ.ವಿ.ಎಸ್. ವಕೀಲರಿಂದ.

ನಾನು ಎಲ್ಲಾ ವಾದಿಗಳ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನಾನು ಮತ್ತು ಇತರ ವಾದಿಗಳು ಕೇವಲ ದಾವಾ ಅನುಸೂಚಿಯ ೧ನೇ ಐಟಂ ಆಸ್ತಿಯ ಮೇಲೆ ವಿಭಾಗವನ್ನು ಕೇಳುತ್ತಿದ್ದೇವೆ ಮತ್ತು ದಾವಾ ಅನುಸೂಚಿಯ ೨ನೇ ಐಟಂ ಆಸ್ತಿಯ ಮೇಲೆ ಯಾವುದೇ ಭಾಗ ಕೇಳುತ್ತಿರಲಿಲ್ಲ. ಪ್ರಸ್ತುತ ದಾವೆ ದಾಖಲಿಸಿದ ಸಮಯದಲ್ಲಿ ದಾವಾ ಅನುಸೂಚಿಯ ೧ನೇ ಐಟಂ ಆಸ್ತಿಯ ಮೌಲ್ಯವು ಸುಮಾರು ಇಪ್ಪತ್ತೈದು ಲಕ್ಷ ಇತ್ತು. ಪ್ರಸ್ತುತ ದಾವೆ ದಾಖಲಿಸಿದ ಸಮಯದಲ್ಲಿ ದಾವಾ ಅನುಸೂಚಿಯ 2ನೇ ಐಟಂ ಆಸ್ತಿಯ ಮೌಲ್ಯವು ಸುಮಾರು ಹದಿನೈದು ಲಕ್ಷ ಇತ್ತು.

2. 2003 ನೇ ಸಾಲಿನಲ್ಲಿ 9 ನೇ ಪ್ರತಿವಾದಿಯ ಗಂಡ ಮುನಿಯಪ್ಪರವರು ಕೋಡೆಪ್ಪರವರ ಮಗ ಮುನಿಯಪ್ಪರವರಿಂದ ದಾವಾ ಅನುಸೂಚಿಯ 2ನೇ ಐಟಂ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ದಾವಾ ಅನುಸೂಚಿಯ ೨ನೇ ಐಟಂ ಆಸ್ತಿಯ ಮುನಿಯಪ್ಪರವರಿಗೆ ಅವರ ತಂದೆ ಕೋಡೆಪ್ಪರವರಿಂದ ಬಂದಿದ್ದು ಮತ್ತು ಸದರಿ ಆಸ್ತಿಯ ಕಂದಾಯ ದಾಖಲೆಗಳು ಮುನಿಯಪ್ಪರವರ ಹೆಸರಿಗೆ ನಮೂದಾಗಿ ಸ್ವಾಧೀನಹೊಂದಿ ಅನುಭವಿಸಿಕೊಂಡು ಬರುತ್ತಿದ್ದ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿ. ಆ ರೀತಿ ಮುನಿಯಪ್ಪರವರು ೨ನೇ ಐಟಂ ಆಸ್ತಿಯನ್ನು ತಮ್ಮ ಹೆಸರಿಗೆ ಪಡೆದುಕೊಂಡ ನಂತರ ಮಾಲೀಕತ್ವ ಮತ್ತು ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ಆ ರೀತಿ ಮುನಿಯಪ್ಪ ರವರ ಹೆಸರಿಗೆ ೨ನೇ ಐಟಂ ಆಸ್ತಿ ಬಂದ ಕುರಿತು ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳು ಅವರ ಹೆಸರಿಗೆ ನಮೂದಾದ ಕುರಿತು ಹಾಗೂ ಮುನಿಯಪ್ಪರವರು 9ನೇ ಪ್ರತಿವಾದಿ ಗಂಡನಿಗೆ ಮಾರಾಟ ಮಾಡಿದ್ದನ್ನು ನಾನು ಮತ್ತು ನನ್ನ ಕುಟುಂಬದವರು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಸದರಿ ೯ನೇ ಪ್ರತಿವಾದಿಯ ಗಂಡ ಮುನಿಯಪ್ಪರವರು ಮೃತಪಟ್ಟ ನಂತರ 2010 ನೇ ಸಾಲಿನಲ್ಲಿ ಮುನಿಯಪ್ಪರವರ ವಾರಸುದಾರರು ದಾವಾ ೨ನ ಐಟಂ ಆಸ್ತಿಯನ್ನು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿರುವುದನ್ನು ನಾನು ಮತ್ತು ಇತರೆ ವಾದಿಗಳು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಸದರಿ ಮುನಿಯಪ್ಪರವರ ವಾರಸುದಾರ ವಿಭಾಗದಲ್ಲಿ ೨ನೇ ಐಟಂ ಆಸ್ತಿಯು ೧೦ ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮುನಿಯಪ್ಪ ರವರ ಮಗನಾದ ೧೦ ನೇ ಪ್ರತಿವಾದಿ ೨ನೇ ಐಟಂ ಆಸ್ತಿಯನ್ನುಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿ. ನನಗೆ ಮತ್ತು ಇತರೆ ವಾದಿಗಳಿಗೆ ಹಾಗೂ 10 ನೇ ಪ್ರತಿವಾದಿ ಹೊರತುಪಡಿಸಿ ಇತರೆ ಪ್ರತಿವಾದಿಗಳಿಗೆ ದಾವಾ ಅನುಸೂಚಿಯ ೨ನೇ ಐಟಂ ಆಸ್ತಿಯಲ್ಲಿ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿ. ನನಗೆ ದಾವಾ ಅನುಸೂಚಿಯ ೨ನೇ ಐಟಂ ಆಸ್ತಿ ವಿರುದ್ದ ದಾವೆ ವಜಾ ಮಾಡಲು ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ದಾವಾ ಅನುಸೂಚಿಯ ೨ನೇ ಐಟಂ ಆಸ್ತಿಯಲ್ಲಿ ನನಗೆ ಮತ್ತು ನನ್ನ ಕುಟುಂಬದವರಿಗೆ ಹಾಗೂ ಇತರೆ ವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.

3. ದಾವಾ ಅನುಸೂಚಿಯ 1ನೇ ಐಟಂ ಆಸ್ತಿ ನನ್ನ ಮತ್ತು ಇತರ ವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ವಂಶವೃಕ್ಷ ವನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.13 ದಾಖಲೆ 9ನೇ ಪ್ರತಿವಾದಿಯ ಗಂಡನಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿಪಿ.11 ದಾಖಲೆ 9 ನೇ ಪ್ರತಿವಾದಿಯ ಗಂಡನ ಮಾರಾಟಗಾರರಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ.

**ಪಾಟೀ ಸವಾಲು:5, ಮತ್ತು 8ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.